# ಪ್ರೌಢಶಿಕ್ಷಣ ಸಾರ್ವತ್ರೀಕರಣ

# ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಆರ್.ಎಂ.ಎಸ್.ಎ

## A SCHEME FOR UNIVERSALIZATION OF ACCESS TO AND IMPROVEMENT OF QUALITY AT THE SECENDARY AND HIGHER SECONDARY STAGE : (SUCCESS)

**ಕನ್ನಡಕ್ಕೆ – ಪುರುಷೋತ್ತಮ ಕುಮಾರ್,**
ಸಹಾಯಕ ನಿರ್ದೇಶಕರು, ಆಯುಕ್ತರ ಕಛೇರಿ.

ಪೀಠಿಕೆ : * ಭಾರತ ದೇಶವು ಪ್ರಪಂಚದಲ್ಲಿಯೇ ಆರ್ಥಿಕವಾಗಿ ವೇಗವಾಗಿ ಬೆಳೆಯುತ್ತಿರುವ ರಾಷ್ಟ್ರವಾಗಿದೆ. ರಾಷ್ಟ್ರದ ಅಭಿವೃದ್ಧಿಗೆ ಮತ್ತು ಗೆಲುವಿಗೆ ಮಾನವ ಸಂಪನ್ಮೂಲ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ಪಾತ್ರ ಬಹಳ ಮಹತ್ತರವಾದುದು. * ಶಿಕ್ಷಣ ಇಲಾಖೆಯಲ್ಲಿ ಪ್ರೌಢಶಿಕ್ಷಣ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ ಅಲ್ಲದೇ ಉನ್ನತ ಶಿಕ್ಷಣಕ್ಕೆ, ತಾಂತ್ರಿಕ ಶಿಕ್ಷಣಕ್ಕೆ, ಔದ್ಯೋಗಿಕ ಶಿಕ್ಷಣಕ್ಕೆ ಹೆಬ್ಬಾಗಿಲಾಗಿರುತ್ತದೆ ಆದುದರಿಂದ 11ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರೌಢಶಿಕ್ಷಣದ ಸಾರ್ವತ್ರೀಕರಣಕ್ಕೆ ಮತ್ತು ಗುಣಮಟ್ಟದ ಪ್ರೌಢಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗಿದೆ.

* ಭಾರತ ಸರ್ಕಾರವು ಪ್ರೌಢಶಿಕ್ಷಣದ ಸಾರ್ವತ್ರೀಕರಣಕ್ಕೆ ಕೇಬ್‌ನ ಉಪ ಸಮಿತಿಯನ್ನು ರಚಿಸಿದೆ. ಸಮಿತಿಯು ಪ್ರೌಢಶಿಕ್ಷಣದ ಅಗತ್ಯ ಮತ್ತು ಪ್ರಾಮುಖ್ಯತೆಯನ್ನು ಗುರುತಿಸಿದ್ದೇ ಅಲ್ಲದೆ ಪ್ರೌಢಶಿಕ್ಷಣಕ್ಕೆ ಹೆಚ್ಚುತ್ತಿರುವ ಬೇಡಿಕೆ ಮತ್ತು ಪಾಲ್ಗೊಳ್ಳುವಿಕೆಯ ಒತ್ತಡ ಹೆಚ್ಚಾಗುತ್ತಿರುವುದನ್ನು ಗಮನಿಸಿದೆ. * ಮಕ್ಕಳು ಕಾರ್ಯಪ್ರಪಂಚಕ್ಕೆ ಹೊಂದಿಕೊಂಡು (world of work) ಪ್ರೌಢಪ್ರಜೆಯಾಗಲು ಮತ್ತು ಸರ್ವಾಂಗೀಣ ಅಭಿವೃದ್ಧಿಯನ್ನು ಹೊಂದಲು ಮೊದಲ 8 ವರ್ಷದ ಶಿಕ್ಷಣದಿಂದ ಸಾಧ್ಯವಾಗುವುದಿಲ್ಲವೆಂದು ಸಮಿತಿ ಗುರುತಿಸಿದೆ. ಆದರೆ ಪ್ರೌಢಶಿಕ್ಷಣವನ್ನು ಸಂವಿಧಾನಾತ್ಮಕವಾಗಿ ಕಡ್ಡಾಯಗೊಳಿಸಲು ಸಾಧ್ಯವಿಲ್ಲ, ಆದ್ದರಿಂದ ಪ್ರೌಢಶಿಕ್ಷಣದ ಪ್ರವೇಶಕ್ಕೆ (Access) ಅಪೇಕ್ಷೆಗೆ ಮತ್ತು ಅಗತ್ಯಕ್ಕೆ ತಕ್ಕಂತೆ ಪ್ರೌಢಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವುದರ ಜೊತೆಗೆ ಗುಣಮಟ್ಟದ ಶಿಕ್ಷಣವನ್ನು ನೀಡಬೇಕಾಗಿದೆ. * ಉದಾರೀಕರಣ ಮತ್ತು ಜಾಗತೀಕರಣದಿಂದ ನಮ್ಮ ದೇಶದ ಆರ್ಥಿಕ ಸ್ಥಿತಿಗತಿಯು ಉತ್ತಮಗೊಳ್ಳಬೇಕಾದ ಅನಿವಾರ್ಯತೆ ಇದೆ. ಬದಲಾದ ವಿಜ್ಞಾನ ಮತ್ತು ತಂತ್ರಜ್ಞಾನಕ್ಕನುಗುಣವಾಗಿ, ಕೇವಲ 8 ವರ್ಷ ಶಿಕ್ಷಣ ಮುಗಿಸಿದ ವಿದ್ಯಾರ್ಥಿಗಳಿಗೆ ಉತ್ತಮ ಜ್ಞಾನವನ್ನು, ಅಲ್ಲದೇ ಸಾಮಾನ್ಯ ಶಿಕ್ಷಣದ ಜೊತೆಗೆ ವೃತ್ತಿಗೆ ಸಂಬಂಧಿಸಿದ ವಿಷಯಗಳಿಗೆ ಒತ್ತು ನೀಡಬೇಕಾಗಿದೆ. * 2002 ರಲ್ಲಿ ಭಾರತದ ಸಂವಿಧಾನ 86 ನೇ ತಿದ್ದುಪಡಿಯಲ್ಲಿ ಭಾರತ ಸರ್ಕಾರ 6–14 ವರ್ಷದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವ ಜವಾಬ್ದಾರಿಯನ್ನು ಹೊಂದಿದ್ದು, ಅದರಂತೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಸರ್ವ ಶಿಕ್ಷಣ ಅಭಿಯಾನ ಎಂಬ ಕಾರ್ಯಕ್ರಮದ ಮೂಲಕ ಸಾರ್ವತ್ರೀಕರಣವನ್ನು ಸಾಧಿಸುವ ಧ್ಯೇಯವನ್ನು ಹೊಂದಿದೆ. * ರಾಷ್ಟ್ರೀಯ ಶಿಕ್ಷಣ ನೀತಿ 1986 ರ ಅನ್ವಯ ಅನುಬಂಧ–1 ರ ಪ್ಯಾರ 5.13 ರಲ್ಲಿ " Access to Secondary Education will be widened with emphasis on enrolment of Girls, SC, STs particularly in science commerce and vocational streams. Vocationalisation through specialized institutions or through the re-fashioning of secondary education will at this stage provide valuble manpower for economic growth" * ಭಾರತ ಸರ್ಕಾರವು ಕೇಬ್ ಸಮಿತಿಯನ್ನು ಪುನಾರಚಿಸಿದ್ದು, 10ನೇ ಯೋಜನೆಯ ಮಧ್ಯಂತರ (ಎಮ್.ಟಿ.ಎ) ವರದಿಯಲ್ಲಿ ಸರ್ವ ಶಿಕ್ಷಣ ಅಭಿಯಾನದ ಮಾದರಿಯಲ್ಲಿ ಪ್ರೌಢಶಿಕ್ಷಣದ ಸಾರ್ವತ್ರೀಕರಣಕ್ಕೆ ವಿಶೇಷ ಯೋಜನೆಯ ಅವಶ್ಯಕತೆ ಇರುತ್ತದೆ ಎಂದು ಶಿಫಾರಸ್ಸು ಮಾಡಿದೆ. * ಪ್ರೌಢಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸಲು ಹೊಸ ಅಭಿಯಾನವನ್ನು ಅಂದರೆ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಅನುಷ್ಠಾನಗೊಳಿಸಲು ಸೂಚಿಸಿರುತ್ತಾರೆ. * 2008–09 ನೇ ಸಾಲಿನಿಂದ ಪ್ರೌಢಶಿಕ್ಷಣದ ಸಾರ್ವತ್ರೀಕರಣಕ್ಕೆ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ–ಸಕ್ಸಸ್ ಅನುಷ್ಠಾನಗೊಳಿಸಲಾಗಿದೆ, * ಪ್ರತಿ ಜಿಲ್ಲೆಯಲ್ಲಿಯೂ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗದವರಿಗೆ ವಿಶೇಷ ಗಮನವನ್ನು ನೀಡಬೇಕಾಗಿರುತ್ತದೆ.

ಪ್ರೌಢಶಿಕ್ಷಣದ ಸಾರ್ವತ್ರೀಕರಣಕ್ಕೆ – ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ–ಸಕ್ಸಸ್ ಕಾರ್ಯಕ್ರಮದ ಉದ್ದೇಶಗಳು, ಗುರಿ ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ. ಪ್ರೌಢಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸಲು ಈ ಕೆಳಕಂಡ ಮೂಲತತ್ವಗಳ ಅಧಾರದ ಮೇಲೆ ಸಮಿತಿಯು ವರದಿಯನ್ನು ನೀಡಲಾಗಿದೆ.

* ಸಾರ್ವತ್ರಿಕ ಅವಕಾಶ (universal Access) * 2. ಸಮಾನತೆ ಮತ್ತು ಸಾಮಾಜಿಕ ನ್ಯಾಯ * ಸಮಂಜಸತೆ ಮತ್ತು ಅಭಿವೃದ್ಧಿ(Relevence and development) * ಪಠ್ಯಕ್ರಮ ಮತ್ತು ಸಂರಚನೆಯ ಪರಿಗಣನೆ (Structural and Curricular concideration)

**ಪ್ರೌಢಶಿಕ್ಷಣದ ಪ್ರಸ್ತುತ ಸ್ಥಿತಿ:**

* ಪ್ರೌಢಶಾಲೆಗಳ ಅಲಭ್ಯತೆ, ಅದರಲ್ಲೂ ಹಿಂದುಳಿದ ಪ್ರದೇಶಗಳಲ್ಲಿ ಪ್ರೌಢ ಶಿಕ್ಷಣದ ಕೊರತೆ. * ಲಿಂಗ, ಸಾಮಾಜಿಕ–ಆರ್ಥಿಕ, ಭೌಗೋಳಿಕ ಅಡಚಣೆಗಳಿಂದ ಶಿಕ್ಷಣದಲ್ಲಿ ಪಾಲ್ಗೊಳ್ಳುವಿಕೆಯ ಕೊರತೆ. * ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ, ಮೂಲಸೌಲಭ್ಯಗಳ ಕೊರತೆ, * ಅಸಂಬಂಧಿತ ಪಠ್ಯವಸ್ತು, ನೀರಸ ಬೋಧನಾ ವಿಧಾನ, ಕಳಪೆ ಮಟ್ಟದ ಬೋಧನೆ–ಕಲಿಕೆ, ಕಡಿಮೆ ಕಲಿಕಾಮಟ್ಟ. * ಪ್ರೌಢಶಿಕ್ಷಣದ ಕಾರ್ಯನಿರ್ವಹಣೆಯ ಪರಿಷ್ಕರಣೆ ಇಲ್ಲದಿರುವುದು. * ಮುಕ್ತ ಮತ್ತು ದೂರ ಕಲಿಕೆಗೆ ಅವಕಾಶ ಅಲಭ್ಯತೆ. * ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮತ್ತು ಸರ್ವಶಿಕ್ಷಣ ಅಭಿಯಾನದ ಕಾರ್ಯಕ್ರಮದ ಮೂಲಕ ಪ್ರೌಢಶಿಕ್ಷಣಕ್ಕೆ ಹೆಚ್ಚುತ್ತಿರುವ ಬೇಡಿಕೆ ಮತ್ತು ಪಾಲ್ಗೊಳ್ಳುವಿಕೆಯ ಒತ್ತಡ ಹೆಚ್ಚಾಗುತ್ತಿರುವುದು ಕಂಡುಬಂದಿದೆ * ಹಿರಿಯ ಪ್ರಾಥಮಿಕ ಶಿಕ್ಷಣದ ಬಲವರ್ಧನೆಯಿಂದ ಪ್ರೌಢಶಿಕ್ಷಣಕ್ಕೆ

ಶಾಲೆಗಳ ಲಭ್ಯತೆ, ದಾಖಲಾತಿ, ಶಿಕ್ಷಕ ಮತ್ತು ವಿದ್ಯಾರ್ಥಿಯ ಅನುಪಾತ ಹೆಚ್ಚುತ್ತಿದ್ದು ಮತ್ತು ಸ್ಥಿತ್ಯಂತರ ದರ ಹೆಚ್ಚಿಸಲು ಪ್ರೌಢಶಿಕ್ಷಣದ ಸಾರ್ವತ್ರೀಕರಣದ ಅವಶ್ಯಕತೆಯಿದೆ. * 2001 ರ ಜನಗಣತಿಯ ಅಧಾರದಲ್ಲಿ 14–16 ನೇ ವಯಸ್ಸಿನ ಒಟ್ಟು ಮಕ್ಕಳ ಸಂಖ್ಯೆ 34.65 ಲಕ್ಷಗಳಿದ್ದು, ಅದರಲ್ಲಿ 22.32 ಲಕ್ಷ ಮಕ್ಕಳು ಪ್ರೌಢಶಿಕ್ಷಣದ ಮುಖ್ಯವಾಹಿನಿಯಲ್ಲಿದ್ದಾರೆ ಉಳಿದ 12.33 ಲಕ್ಷ ಮಕ್ಕಳನ್ನು ಪ್ರೌಢಶಿಕ್ಷಣದ ವ್ಯಾಪ್ತಿಯೊಳಗೆ ತಂದು ಗುಣಮಟ್ಟದ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಬೇಕಾಗಿದೆ

**ಗುರಿ:**

ಪ್ರೌಢಶಿಕ್ಷಣ ಸಾರ್ವತ್ರೀಕರಣ ಕಾರ್ಯಕ್ರಮದಿಂದ 14ರಿಂದ 18 ವಯೋಮಿತಿಯ ಉತ್ತಮ ಗುಣಮಟ್ಟದ ಪ್ರೌಢಶಿಕ್ಷಣವನ್ನು ಎಲ್ಲಾ ತರುಣರಿಗೆ ಸುಲಭಸಾಧ್ಯವಾಗುವಂತೆ ಮಾಡುವುದು. * 2017ರೊಳಗೆ ಪ್ರೌಢಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶವನ್ನು ಕಲ್ಪಿಸುವುದು.

**ಉದ್ದಿಷ್ಟಗಳು**

* ಪ್ರಾಥಮಿಕ ಶಿಕ್ಷಣವನ್ನು ಮುಗಿಸುವ ಎಲ್ಲ ಮಕ್ಕಳೂ ಪ್ರೌಢಶಿಕ್ಷಣವನ್ನು ಪೂರ್ಣ ಮಾಡುತ್ತಾರೆಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು. ಎಂದರೆ 2015ರ ವೇಳೆಗೆ ಹತ್ತು ವರ್ಷಗಳ ಶಾಲಾ ಕಲಿಕೆಯನ್ನು ಎಲ್ಲ ಮಕ್ಕಳೂ ಪೂರ್ಣಗೊಳಿಸಿರುತ್ತಾರೆ. ಶಾಲೆಗೆ ಸೇರುವ ಮಕ್ಕಳಲ್ಲಿ ಕೊನೆಯಪಕ್ಷ ಶೇಕಡ 80 ರಷ್ಟು ಮಕ್ಕಳಾದರೂ ಗುಣಮಟ್ಟದ ಪ್ರೌಢಶಿಕ್ಷಣವನ್ನು ಪಡೆಯುವಂತಾಗಬೇಕು. * ಪ್ರೌಢಶಾಲಾ ಹಂತದಲ್ಲಿ ಯಾರೂ ಶಾಲೆಯನ್ನು ಬಿಡದಂತೆ ಜಾಗ್ರತೆ ವಹಿಸಬೇಕು. ಅಲ್ಲದೆ ಹತ್ತು ವರ್ಷಗಳ ಶಾಲಾ ಶಿಕ್ಷಣವನ್ನು ಪಡೆದ ಮಕ್ಕಳಲ್ಲಿ, ಮುಂದಿನ ವಿದ್ಯಾಭ್ಯಾಸಕ್ಕೆ ಅಥವಾ ಉದ್ಯೋಗಕ್ಕೆ ಬೇಕಾಗುವ ಎಲ್ಲ ಜ್ಞಾನ ಮತ್ತು ಕೌಶಲಗಳು ವೃದ್ಧಿಯಾಗಿರುತ್ತದೆ ಎಂಬುದನ್ನು ಖಾತ್ರಿಪಡಿಸಬೇಕು. ಅಂದರೆ ಪ್ರೌಢಶಿಕ್ಷಣವು ಮಕ್ಕಳನ್ನು ಮುಂದಿನ ವಿದ್ಯಾಭ್ಯಾಸಕ್ಕಾಗಲೀ ಅಥವಾ ಸದಾ ಪರಿವರ್ತನಶೀಲವಾದ ಕಾರ್ಯ ಪ್ರಪಂಚದ ಸವಾಲುಗಳನ್ನು ಎದುರಿಸಲು ಬೇಕಾದ ಸಾಮರ್ಥ್ಯಗಳನ್ನು ಪಡೆಯುವಂತೆ ಅವರನ್ನು ಸಿದ್ಧಗೊಳಿಸಬೇಕು.

**ಅವಕಾಶ ಮತ್ತು ವ್ಯಾಪ್ತಿ (Access and coverage)**

(ಅ) ಜನಸಂಖ್ಯೆಯ ಹೆಚ್ಚಳದಿಂದ ಶಾಲೆಯಿಂದ 5 ಕಿ.ಮೀ. ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಮಕ್ಕಳು ಪ್ರೌಢಶಾಲೆಗೆ ಬರುವುದು ಕಷ್ಟಸಾಧ್ಯವಾಗಿದೆ. ರಾಜ್ಯದ ಉತ್ತರ ಜಿಲ್ಲೆಗಳಲ್ಲಿ ಅನೇಕ ಕಡೆ ಇಂದೂ ಸಹ ಪ್ರೌಢಶಾಲೆಗೆ ಹೋಗುವುದು ದುಸ್ಸಾಧ್ಯವಾಗಿದೆ. ಕೇರಳ ರಾಜ್ಯದ ಅನುಭವದಿಂದ, ಪ್ರಾಥಮಿಕ ಶಾಲೆಗೆ ಸೇರುವ ವಿದ್ಯಾರ್ಥಿಗಳಲ್ಲಿ 85% ಮಕ್ಕಳು, ಶಾಲೆಗೆ ಹೋಗುವುದು ಸಮಸ್ಯೆಯಾಗದಿದ್ದರೆ, ಪ್ರೌಢಶಿಕ್ಷಣವನ್ನು ಪೂರೈಸುವುದು ಕಷ್ಟವೇನಲ್ಲ ಎನ್ನಿಸುತ್ತದೆ.

(ಆ) ರಾಜ್ಯ ಸರ್ಕಾರವು ರಾಜ್ಯ ಮಟ್ಟದಲ್ಲಿ ಶಾಲಾ ನಕ್ಷೆಯನ್ನು ತಯಾರಿಸುವ ಕಾರ್ಯವನ್ನು ಕೈಗೆತ್ತಿಕೊಂಡು, ಸಾಕಷ್ಟು ಗಮನ ಪಡೆಯದ ಪ್ರದೇಶಗಳಲ್ಲಿ ಶಾಲೆಗಳನ್ನು ಸ್ಥಾಪಿಸುವಂತೆ ನೋಡಿಕೊಳ್ಳಬೇಕು. ಪರಿಶಿಷ್ಟ ಜಾತಿ/ಪಂಗಡ, ಅಲ್ಪ ಸಂಖ್ಯಾತರು ಮತ್ತು ಗ್ರಾಮೀಣ ಪ್ರದೇಶಗಳ ಬಾಲಕಿಯರ ಹಿತದೃಷ್ಟಿಯಿಂದ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲಾ ಪ್ರದೇಶಗಳಲ್ಲಿ 5 ಕಿ.ಮೀ. ನಿಯಮವನ್ನು 3 ಕಿ.ಮೀ.ಗೆ ಇಳಿಸಬೇಕು.

(ಇ) 5 ಕಿ.ಮೀ. ನಿಯಮವನ್ನು ಸಡಿಲಗೊಳಿಸಿ ಯಾವುದೇ ಪ್ರಾಥಮಿಕ ಶಾಲೆಯ ಎಂಟನೇ ತರಗತಿಯಲ್ಲಿ 30 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದರೆ ಅಲ್ಲಿಗೆ ಪ್ರೌಢಶಾಲೆಯನ್ನು ಮಂಜೂರು ಮಾಡಬಹುದು.

(ಈ) ಶಾಲಾ ನಕ್ಷೆಯನ್ನು ತಯಾರಿಸುವಾಗ ನಡೆಯುತ್ತಿರುವ ಶಾಲೆಗಳ ಕೊರತೆಯನ್ನೂ ನಮೂದಿಸಬೇಕು. ಅಂತಹ ಶಾಲೆಗಳ ದರ್ಜೆಯನ್ನು ಏರಿಸುವ ಸಲುವಾಗಿ ಅಂತಹ ಶಾಲೆಗಳಿಗೆ ಸರಕಾರವು ಹಂತ ಹಂತವಾಗಿ ಅನುದಾನ ನೀಡಿ ಉನ್ನತೀಕರಣಕ್ಕೆ ಸಹಾಯ ನೀಡಬೇಕು.

**ಗುಣಮಟ್ಟದ ಶಿಕ್ಷಣ**

* ಪ್ರತಿ ಶಾಲೆಗೆ ಐದು ವರ್ಷಗಳ ಅವಧಿಯಲ್ಲಿ ಅವಶ್ಯಕ ಮೂಲ ಸಂರಚನೆಗಳಾದ ಕಪ್ಪು ಹಲಗೆ, ಪೀಠೋಪಕರಣ, ಗ್ರಂಥಾಲಯ, ವಿಜ್ಞಾನ, ಗಣಿತ ಮತ್ತು ಕಂಪ್ಯೂಟರ್ ಪ್ರಯೋಗಾಲಯ, ಶೌಚಾಲಯಗಳನ್ನು ಒದಗಿಸುವುದು. ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಯನ್ನನುಸರಿಸಿ ಸಜ್ಜುಗೊಳಿಸಬೇಕು. * ಹೆಚ್ಚುವರಿ ಶಿಕ್ಷಕರ ನೇಮಕಾತಿ ಮತ್ತು ಸೇವಾನಿರತ ಶಿಕ್ಷಕರಿಗೆ ತರಬೇತಿ. * 8ನೇ ತರಗತಿ ಪಾಸಾದ ಮಕ್ಕಳಿಗೆ ಸೇತುಬಂಧ ಕಾರ್ಯಕ್ರಮ * ಎನ್.ಸಿ.ಎಫ್.– 2005ರಂತೆ ಪಠ್ಯಕ್ರಮ ಪರಿಷ್ಕರಣೆ * ಗ್ರಾಮಾಂತರ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಕೆಲಸಮಾಡುವ ಶಿಕ್ಷಕರಿಗೆ ವಸತಿ ವ್ಯವಸ್ಥೆ.

ಮೇಲ್ಕಂಡ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸಲು ಪ್ರೌಢಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರ್ವ ಯೋಜನಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಾಗಿದೆ ಅವುಗಳೆಂದರೆ,

* ಬೇಸ್ ಲೈನ್ ಅಸೆಸ್‌ಮೆಂಟ್ * ಶಾಲಾ ನಕ್ಷೆ ತಯಾರಿಕೆ * ಪ್ರೌಢಶಿಕ್ಷಣದ ಅಂಕಿ–ಅಂಶಗಳ ಸಂಘಟನೆ. ಕ್ರೋಢೀಕರಣ * 14–16 ವರ್ಷ ವಯೋಮಾನದ ಮಕ್ಕಳ ಸಮೀಕ್ಷೆ * ಪ್ರೌಢ ಶಿಕ್ಷಣದ ಮಹತ್ವದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ * ಇ–ಆಡಳಿತದಿಂದ ಏಕಗವಾಕ್ಷಿಯ ಮೂಲಕ ಅಂಕಿ–ಅಂಶಗಳ ನಿರ್ವಹಣೆ(ಡೈಸ್ ಮಾದರಿ) * ಪ್ರೌಢಶಿಕ್ಷಣದ ಗುರಿ ಮತ್ತು ಉದ್ದೇಶಗಳ ಬಗ್ಗೆ ರಾಜ್ಯದ ಎಲ್ಲಾ ಪ್ರಜಾಪ್ರತಿನಿಧಿಗಳಿಗೆ ಪರಿಚಯಾತ್ಮಕ ಕಾರ್ಯಕ್ರಮ * ಪ್ರೌಢ ಶಿಕ್ಷಣದ ಗುರಿ ಮತ್ತು ಉದ್ದೇಶಗಳ ಬಗ್ಗೆ ರಾಜ್ಯದ ಎಲ್ಲಾ ಆಡಳಿತಗಾರರಿಗೆ ಪರಿಚಯಾತ್ಮಕ ಕಾರ್ಯಕ್ರಮ.

ಪ್ರಸ್ತುತ ಆರ್.ಎಮ್.ಎಸ್.ಎ ಕಾರ್ಯಕ್ರಮಕ್ಕೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ವಿವಿಧ ಸಮಿತಿಗಳು ರಚನೆಯ ಹಂತದಲ್ಲಿವೆ. ರಾಜ್ಯಮಟ್ಟದಲ್ಲಿ ಆಯುಕ್ತರ ನೇತೃತ್ವದಲ್ಲಿ ನಿರ್ದೇಶಕರು (ಪ್ರೌಢಶಿಕ್ಷಣ) ಇವರು ಸದಸ್ಯ ಕಾರ್ಯದರ್ಶಿಗಳಾಗಿದ್ದು, ಎನ್.ಬಿ. ಪಾಟೀಲ್, ಸಹನಿರ್ದೇಶಕರು (ಬೆಂಗಳೂರುವಿಭಾಗ) ಇವರು ಉಸ್ತುವಾರಿ ಅಧಿಕಾರಿಗಳಾಗಿದ್ದಾರೆ. ಪುರುಷೋತ್ತಮ ಕುಮಾರ್, ಸಹಾಯಕ ನಿರ್ದೇಶಕರು ರಾಜ್ಯಮಟ್ಟದ ನೋಡೆಲ್ ಅಧಿಕಾರಿಗಳಾಗಿದ್ದು, ಪ್ರತಿ ಜಿಲ್ಲೆಗೊಬ್ಬ ನೋಡೆಲ್ ಅಧಿಕಾರಿಯನ್ನು ನೇಮಿಸಲಾಗಿದೆ.

**ಮಾಹಿತಿಗಾಗಿ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳು**

**ಎನ್.ಬಿ.ಪಾಟೀಲ್– 9449823723**

**ಪುರುಷೋತ್ತಮ ಕುಮಾರ್– 9448999468**

**mail ID-purushothamakumar37@gmail.com**